ಆ) ಜಲಸಂಗ್ರಹಕ್ಕಾಗಿ ಆಗ ಗುಡ್ಡದ ಮೇಲೆ ನಿರ್ಮಾಣವಾದ ತೊಟ್ಟಿ ಪೂರ್ಣ ಶಿಥಿಲ ಗೊಂಡಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಬದಲಿ ತೊಟ್ಟಿ ಕಟ್ಟಿಸುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧೯೬೯ ರಲ್ಲಿ.

ಆ) ಬಂದಿದೆ.

ಇ) ಬದಲಿ ತೊಟ್ಟಿ ಕಟ್ಟಿಸುವ ಯೋಜನೆ ಇರುವುದಿಲ್ಲ. ಅದೇ ತೊಟ್ಟಿಯನ್ನು ಕೂಡಲೇ ದುರಸ್ತಿಗೊಳಿಸಿ ಉಪಯೋಗಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಿಗೆ ಒಂದು ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ನಾನು ಇಚ್ಛಿಸುತ್ತೇನೆ. ಈ ಅಮಲರುಗಳಲ್ಲಿ ಗ್ರಾಮ, ಬೀಳಗಿ ತಾಲ್ಲೂಕಿನಲ್ಲಿ ಇರುವ ಐದಾರು ದೊಡ್ಡ ದೊಡ್ಡ ಗ್ರಾಮಗಳಲ್ಲಿ ಒಂದು ಗ್ರಾಮ ಇಲ್ಲಿಯ ಜನಸಂಖ್ಯೆ ನಾಲ್ಕುವರೆ ಸಾವಿರ ಇದೆ. ೧೯೬೯ರಲ್ಲಿ ಈಗಿರುವ ನೀರು ಪೂರೈಕೆ ಯೋಜನೆಯನ್ನು ನಿರ್ಮಾಣ ಮಾಡುವ ಕಾಲದಲ್ಲಿ ಅಲ್ಲಿಯ ಜನಸಂಖ್ಯೆ ಕೇವಲ ಎರಡು ಸಾವಿರಕ್ಕಿಂತ ಮಿಕ್ಕಿರಲಿಲ್ಲ. ಈಗ ಈ ಗ್ರಾಮದಲ್ಲಿ ಎರಡು ಜನತಾ ಕಾಲೋನಿಗಳು ಹರಿಜನ ಕಾಲೋನಿಗಳು ಆಗಿವೆ. ಈ ಊರಿನ ಜನಸಂಖ್ಯೆ ಈಗ ನಾಲ್ಕೂವರೆ ಸಾವಿರಕ್ಕೆ ಬಂದು ಮುಟ್ಟಿದೆ. ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ, ಬೇರೆ ನೀರಿನ ತೊಟ್ಟಿಯನ್ನು ಕಟ್ಟಿಸುವ ಯೋಜನೆ ಇರುವುದಿಲ್ಲ, ಅದೇ ತೊಟ್ಟಿಯನ್ನು ಕೂಡಲೇ ದುರಸ್ತಿಗೊಳಿಸಿ ಉಪಯೋಗಿಸಲಾಗುವುದು ಎಂದು ಹೇಳಿದ್ದೀರಿ. ನಾನು ವಿಧಾನಸಭೆಗಾದರೆ ಆ ಊರಿಗೆ ಹೋಗುತ್ತಿರುತ್ತೇನೆ. ಅಲ್ಲಿಯ ಪರಿಸ್ಥಿತಿ ನನಗೆ ಗೊತ್ತಿದೆ. ಇದನ್ನು ದುರಸ್ತಿಗೊಳಿಸುವುದರಲ್ಲಿ ಏನೂ ಲಾಭ ಇಲ್ಲ ಹಾಗೂ ಏನೂ ಅನುಕೂಲ ಆಗುವುದಿಲ್ಲ. ಹೊಸ ತೊಟ್ಟಿಯನ್ನು ಕಟ್ಟಿದರೆ ಎಷ್ಟು ಖರ್ಚು ಬರುತ್ತದೋ, ಹಳೆಯದನ್ನು ದುರಸ್ತಿ ಮಾಡುವುದಕ್ಕೂ ಅಷ್ಟೇ ಖರ್ಚು ಬರುತ್ತದೆ. ಅಲ್ಲಿ ಒಂದೇ ಇಲೆಕ್ಟ್ರಿಕ್ ಪಂಪ್ ಚಾಲೂ ಇರುವುದು, ಅಲ್ಲಿಂದ ಈ ತೊಟ್ಟಿಗೆ ನೀರನ್ನು ಪಂಪ್ ಮಾಡಿದರೆ ಅದರಲ್ಲಿ ಒಂದು ಹನಿ ನೀರೂ ಕೂಡಾ ನಿಲ್ಲುವುದಿಲ್ಲ. ನಾಲ್ಕೂವರೆ ಸಾವಿರ ಜನಸಂಖ್ಯೆ ಇರುವ ದೊಡ್ಡ ಊರಿಗೆ ಬೇರೆ ಕುಡಿಯುವ ನೀರಿನ ವ್ಯವಸ್ಥೆ ಏನೂ ಇರುವುದಿಲ್ಲ. ಒಂದು ಕುಡಿಯುವ ನೀರಿನ ಬಾವಿಯೂ ಇಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೆಚ್ಚು ವಿವರಣೆ ಬೇಡ, ಬೇರೆ ತೊಟ್ಟಿ ಮಾಡಿಸಿ ಕೊಡುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಆದಷ್ಟು ಬೇಗ ತೀರ್ಪುವಾಗಿ ಮಾಡಿಸಿಕೊಟ್ಟರೆ ಅನುಕೂಲ ವಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇರೆ ತೊಟ್ಟಿ ಕುಡಿಯುವ ನೀರಿನ ನಲ್ಲಿ ಸೌಕರ್ಯ ಎಲ್ಲಾ ಒದಗಿಸಿಕೊಡುತ್ತೇನೆ.

ಕಾವೇರಿ ನೀರು ಸರಬರಾಜಿನ ೩ನೇ ಹಂತ

೫೦ (೨೨೩) ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಸಂಸದೀಯ ವ್ಯವಹಾರ, ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ಕಾವೇರಿ ೩ನೇ ಹಂತದ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು.

(ಆ) ಯೋಜನೆಯ ವೆಚ್ಚ ಹಾಗೂ ಆರ್ಥಿಕ ಮೂಲ.

(ಇ) ವಿವಿಧ ಮೂಲಗಳಿಂದ ಬಂದಿರುವ ಧನ ಸಹಾಯ.

(ಈ) ಯೋಜನೆಯನ್ನು ಯಾವಾಗ ಮುಗಿಸಲು ಉದ್ದೇಶಿಸಲಾಗಿದೆ ಹಾಗೂ ಕಾಮಗಾರಿಗಳ ಈಗಿನ ಸ್ಥಿತಿ ಏನು?

(ಉ) ಯೋಜನೆಯ ಪ್ರಾರಂಭದಿಂದ ಈವರೆಗೆ ವೆಚ್ಚವಾಗಿರುವ ಮೊಬಲಗುಗಳ ವಿವರಣೆ.

(ಊ) ಯೋಜನೆಯ ಕಾರ್ಯಗಳ ತಡವಾಗಿರುವ ಬಗ್ಗೆ ಕಾರಣಗಳು.

(ಋ) ನಗರದ ಜನತೆಗೆ ನೀರು ಸರಬರಾಜಿನಲ್ಲಿ ಆಗುತ್ತಿರುವ ಅತಿ ತೊಂದರೆಗಳಿಗೆ ಯೋಜನೆಯ ಕಾರ್ಯ ವಿಫಲತೆಯ ಕಾರಣವು ಅಥವಾ ಇರುವ ನೀರಿನ ವಿತರಣೆಯ ಅಸಾಮಾನತೆಯೇ ?

ಪ್ರೊ॥ ಎ. ಲಕ್ಷ್ಮಿಸಾಗರ್ (ಸಂಸದೀಯ, ವ್ಯಪಹಾರ ಆಹಾರ ಮತ್ತು ನಾಗರೀಕ ಮಂತ್ರಿಗಳು).—

(ಅ) ಈ ಯೋಜನೆಯನ್ನು ದಿನಾಂಕ ೧ನೇ ಜುಲೈ ೧೯೮೫ರಂದು ಕರ್ನಾಟಕ ಮಾನ್ಯ ಮುಖ್ಯ ಮಂತ್ರಿಯವರಿಂದ ಉದ್ಘಾಟಿಸಲಾಯಿತು. ಹಾಗೂ ಕೆಲವು ಮಹತ್ವದ ಕೆಲಸಗಳನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ.

(ಆ) ಈ ಯೋಜನೆಯ ವೆಚ್ಚ ರೂ. ೨೪೦.೦೦ ಕೋಟಿ ಹಾಗೂ ಇದಕ್ಕೆ ಬೇಕಾದ ಧನ ಸಹಾಯವನ್ನು ಈ ಕೆಳಗಿನ ಮೂಲಗಳಿಂದ ಪಡೆಯಲು ಯೋಚಿಸಲಾಗಿದೆ.

೧.	ರಾಜ್ಯ ಸರ್ಕಾರ	...	ರೂ. ೮೦.೦೦ ಕೋಟಿ
೨.	ಜೀವ ವಿಮಾ ನಿಗಮ	...	ರೂ. ೫೦.೦೦ ಕೋಟಿ
೩.	ಬೆಂಗಳೂರು ನಗರ ಸಭೆ	...	ರೂ. ೩೦.೦೦ ಕೋಟಿ
೪.	ವಿಶ್ವ ಬ್ಯಾಂಕ್	...	ರೂ. ೮೦.೦೦ ಕೋಟಿ
	ಒಟ್ಟು		ರೂ. ೨೪೦.೦೦ ಕೋಟಿ

(ಇ) ಬೆಂಗಳೂರು ನಗರ ಸಭೆಯು ೧೯೮೭-೮೮ರಿಂದ ರೂ. ೩೦.೦೦ ಕೋಟಿ ಸಹಾಯಧನವನ್ನು ಒದಗಿಸಲು ಈಗಾಗಲೇ ಒಪ್ಪಿಗೆ ನೀಡಿದೆ. ರಾಜ್ಯ ಸರ್ಕಾರದವರು ರೂ. ೫೫.೭೨ ಕೋಟಿಯನ್ನು ೧೯೮೫-೮೬ರ ಸಾಲಿಗೆ ಕೊಟ್ಟಿರುತ್ತಾರೆ ಹಾಗೂ ೧೯೮೬-೮೭ರಲ್ಲಿ ರೂ. ೧೦.೭೨ ಕೋಟಿಯನ್ನು ವಾರ್ಷಿಕ ಅಂದಾಜು ವೆಚ್ಚದಲ್ಲಿ ಒದಗಿಸಿರುತ್ತಾರೆ. ಕರ್ನಾಟಕ ಸರ್ಕಾರವು ತನ್ನ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. ೨೧೦.೦೦ ಕೋಟಿಯನ್ನು ಅಂತರಪಲಯ ಹೊಂದಾಣಿಕೆಯಲ್ಲಿ ಅಳವಡಿಕೆ. ಭಾರತ ಸರ್ಕಾರಕ್ಕೆ ತಿಳಿಸಿದೆ. ಈ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿಗೆ ಇಡಲು ಸಹ ಕೇಳಲಾಗಿದೆ. ಮುಂದುವರೆದು ಜೀವ ವಿಮಾ ನಿಗಮವು ರೂ. ೫೦.೦೦ ಕೋಟಿಯ ಧನ ಸಹಾಯ ಸಾಲದ ರೂಪದಲ್ಲಿ ಮಂಜೂರು ಮಾಡಿದೆಯೆಂದು ತಿಳಿದುಬಂದಿದೆ.

(ಈ) ಯೋಜನೆಯನ್ನು ೧೯೮೯-೯೦ ರೊಳಗೆ ಮುಗಿಸಲು ಉದ್ದೇಶಿಸಲಾಗಿದೆ ಹಾಗೂ ಮುಖ್ಯ ಕಾಮಗಾರಿಗಳ ಈಗಿನ ಸ್ಥಿತಿಯನ್ನು ಈ ಕೆಳಗೆ ವಿವರಿಸಲಾಗಿದೆ.

೧. ಶುದ್ಧ ನೀರಿನ ಜಲಗಾರ ಹಾಗೂ ಪಂಪ್ ಹೌಸ್ ನಿರ್ಮಾಣ

ಈ ಕಾಮಗಾರಿಗಳು ತಾಟಗುಣಿ, ಹಾರೋಹಳ್ಳಿ ಹಾಗೂ ಟಿ.ಕೆ ಹಳ್ಳಿಗಳಲ್ಲಿ ಪ್ರಾರಂಭವಾಗಿದ್ದು ಭೂಮಿ ಅಗೆಯುವಿಕೆ ಕಾರ್ಯವು ನಡೆಯುತ್ತಿದೆ. ಪೂರ್ಣಗೊಂಡಿದೆ.

೨. ನದಿ ಸೇತುವೆಗಳ ನಿರ್ಮಾಣ

ಸುವರ್ಣಮುಖಿ ನದಿ ಸೇತುವೆ ನಿರ್ಮಾಣ ಕಾರ್ಯವು ಮುಗಿದಿದ್ದು, ಶಿಂಶಾ ಹುಲ್ಲುಹಳ್ಳಿ, ಆರ್ಕಾವತಿ ಹಾಗೂ ಭೀಮ ನದಿ ಸೇತುವೆಗಳ ಅಡಿಪಾಯ ಕೆಲಸಗಳು ನಡೆಯುತ್ತಿವೆ.

೩. ಕಛೇರಿ ಕಟ್ಟಡದ ನಿರ್ಮಾಣ

ಹಾರೋಹಳ್ಳಿ ಮತ್ತು ತಾಟಗುಣಿಯಲ್ಲಿರುವ ಕಛೇರಿ ಕಟ್ಟಡಗಳ ಕೆಲಸಗಳು ಮುಗಿದಿರುತ್ತದೆ. ಹಾಗೂ ಟಿ.ಕೆ. ಹಳ್ಳಿಗಳಲ್ಲಿ ತೆಗೆದುಕೊಂಡಿದ್ದು ವಿವಿಧ ಮುಕ್ತಾಯ ಹಂತದಲ್ಲಿರುತ್ತದೆ.

(ಉ) ಯೋಜನೆಗೆ ಈವರೆಗೆ ವೆಚ್ಚವಾಗಿರುವ ಮೊಬಲಗುಗಳ ವಿವರಣೆ ಕೆಳಗೆ ನಮೂದಿಸಲಾಗಿದೆ.

ಲಕ್ಷಗಳಲ್ಲಿ

೧. ೧೯೮೫-೮೬ರ ಸಾಲಿನಲ್ಲಿ—ರೂ. ೨೫೪.೫೧

೨. ೧೯೮೬-೮೭ರ ಸಾಲಿನಲ್ಲಿ—ರೂ. ೧೫೮.೫೬
(ಜುಲೈ ೧೯೮೬ರ ವರೆಗೆ)

(ಊ) ಯೋಜನೆಯನ್ನು ವಿಶ್ವ ಬ್ಯಾಂಕ್ ಮುಂದಿಡಲು ಕೆಲವಾರು ಔಪಚಾರಿಕ ವ್ಯವಹಾರಗಳಿಗೋಸ್ಕರ ಕೆಲವು ಸಮಯ ಹಿಡಿಯಿತು. ಆದಾಗ್ಯೂ ಮಂಡಳಿಯು ಯೋಜನೆಯ ನೀರು ಸರಬರಾಜು ಕಾರ್ಯವನ್ನು ಪೂರ್ಣಗೊಳಿಸುವ ಸಾಧ್ಯತೆಯಲ್ಲಿದೆ. ಈ ಕಾಮಗಾರಿ ಕೆಲಸಗಳು ಪೂರ್ಣಗೊಂಡರೆ ನಗರಕ್ಕೆ ದಿನಂ ಪ್ರತಿ ೬೦ ದಶಲಕ್ಷ ಗ್ಯಾಲನ್ ಹೆಚ್ಚುವರಿ ನೀರು ೧೯೮೯–೯೦ರ ಅವಧಿಯಲ್ಲಿ ಸರಬರಾಜು ಆಗುತ್ತದೆ.

(ಋ) ಈಗಿನ ನೀರಿನ ಅಭಾವಕ್ಕೆ ಹಾಗೂ ಜನತೆಯು ತೊಂದರೆಗೆ ಯೋಜನೆಯು ವಿಫಲತೆಯಾಗಲೀ ಅಥವಾ ಲಭ್ಯವಿರುವ ನೀರಿನ ಅಸಮಾನ ವಿತರಣೆಯಾಗಲೀ ಕಾರಣವಲ್ಲ. ೩ನೇ ಹಂತದ ಕಾವೇರಿ ಯೋಜನೆಗೂ, ನೀರಿನ ಅಭಾವಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ನೀರಿನ ಅಭಾವಕ್ಕೆ ಮುಖ್ಯ ಕಾರಣ ಹಿಂದಿನ ಎಗ್ಗಡು ವರ್ಷಗಳಿಂದ ಸರಿಯಾಗಿ ಮಳೆಯಾಗದೆ ತಿಪ್ಪಗೊಂಡನಹಳ್ಳಿ ಹಾಗೂ ಹೆಸರಘಟ್ಟ ಜಲಾಶಯಗಳು ಬತ್ತಿ ಹೋದದ್ದು ಇದರಿಂದ ಕಾವೇರಿ ನೀರಿನ್ನು ಪಶ್ಚಿಮ ಭಾಗಕ್ಕೆ ಸಾಗಿಸುವ ಕಾರ್ಯವನ್ನು ಮಾಡಬೇಕಾಯಿತು. ಕಾವೇರಿ ೩ನೇ ಹಂತದ ಯೋಜನೆಯನ್ನು ೧೯೮೯–೯೦ರ ವರೆಗೆ ಪೂರ್ಣಗೊಳಿಸಲಾಗುವುದು.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ ೧–೭–೧೯೮೫ರಂದು ಕಾವೇರಿ ೩ನೇ ಹಂತಕ್ಕೆ ಶಂಕುಸ್ಥಾಪನೆಯನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಕಾವೇರಿ ನೀರು ಸರಬರಾಜಿನ ೩ನೇ ಹಂತಕ್ಕೆ ೨೪೦ ಕೋಟಿ ರೂಪಾಯಿಗಳ ಫೈನಾನ್‌ಷಿಯಲ್ ಅಶಿಸ್ಟೆನ್ಸ್ ಪ್ಯಾಟ್ರನ್ ಏನು ಇದೆ, ಅದಕ್ಕೆ ರಾಜ್ಯ ಸರ್ಕಾರದಿಂದ ೮೦ ಕೋಟಿ ರೂಪಾಯಿಗಳು, ಎಲ್.ಐ.ಸಿ. ಯಿಂದ ೫೦ ಕೋಟಿ ರೂಪಾಯಿಗಳು, ಬಿ.ಸಿ.ಸಿ. ಯಿಂದ ೩೦ ಕೋಟಿ ರೂಪಾಯಿಗಳು ಹಾಗೂ ವರ್ಲ್ಡ್ ಬ್ಯಾಂಕಿನಿಂದ ೮೦ ಕೋಟಿ ರೂಪಾಯಿಗಳನ್ನು ಪಡೆಯಬೇಕೆಂದು ಇದೆ. ಒಟ್ಟು ಇದರ ಯೋಜನೆಯ ವೆಚ್ಚ ೨೪೦ ಕೋಟಿ ರೂಪಾಯಿಗಳು. ಯಾವಾಗ ಮಾನ್ಯ ರಾಮಕೃಷ್ಣ ಹೆಗಡೆಯರು ಬಸವನಗುಡಿ ಕ್ಷೇತ್ರದಿಂದ ಸ್ಪರ್ಧಿಸಬೇಕಾಗಿತ್ತೋ ಆಗ ಕಾವೇರಿ ನೀರಿನ ಸರಬರಾಜಿನ ೩ನೇ ಹಂತವನ್ನು ಮಾಡುತ್ತೇವೆಂದು ಶಂಕುಸ್ಥಾಪನೆಯನ್ನು ಮಾಡಿದ್ದಾರೆ. ೧೯೮೧–೮೨ರಲ್ಲಿ ಕಾವೇರಿ ಸೆಕೆಂಡ್ ಸ್ಟೇಜನ್ನು ಮುಗಿಸಲಿಕ್ಕೆ ೪೦ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದೆವು. ಕಾವೇರಿ ಸೆಕೆಂಡ್ ಸ್ಟೇಜ್ ಮುಗಿಯುವ ಹೊತ್ತಿಗೆ ಕಾವೇರಿ ಥರ್ಡ್ ಸ್ಟೇಜ್‌ನ್ನು ಪ್ರಾರಂಭ ಮಾಡಬೇಕಾಗಿತ್ತು. ಆದರೆ ಇದುವರೆಗೂ ಆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಬೆಂಗಳೂರು ನಗರದಲ್ಲಿ ಈಗ ಸುಮಾರು ೫೦ ರಿಂದ ೬೦ ಲಕ್ಷದವರೆಗೂ ಜನಸಂಖ್ಯೆ ಇದೆ. ಇಷ್ಟು ಹೊತ್ತಿಗೆ ಕಾವೇರಿ ಥರ್ಡ್ ಸ್ಟೇಜ್‌ನ್ನು ಪ್ರಾರಂಭ ಮಾಡಬೇಕಾಗಿತ್ತು. ಈಗಾಗಲೇ ನಗರದಲ್ಲಿ ನೀರಿನ ಸಮಸ್ಯೆ ತಲೆದೂರಿದೆ. ಈ ಯೋಜನೆಗೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಏನು ಫೈನಾನ್ಸಿಯಲ್ ಪ್ಯಾಟ್ರನ್ ಇದೆ, ಅದರಲ್ಲಿ ಇವರು ೩ ಕೋಟಿ ರೂಪಾಯಿಗಳನ್ನು ಸಹ ಇದುವರೆಗೂ ಖರ್ಚು ಮಾಡಿಲ್ಲ. ರಾಜ್ಯ ಸರ್ಕಾರದವರು ಖರ್ಚು ಮಾಡುವ ೮೦ ಕೋಟಿ ರೂಪಾಯಿಗಳಲ್ಲಿ ಇವರು ೩ ಕೋಟಿ ರೂಪಾಯಿಗಳನ್ನು ಸಹ ಖರ್ಚು ಮಾಡಿಲ್ಲ ಎಂದರೆ ಹೇಗೆ ? ಇವರು ಯಾವ ರೀತಿ ಖರ್ಚು ಮಾಡುತ್ತಾರೋ ಅದನ್ನು ನೋಡಿಕೊಂಡು ಎಲ್.ಐ.ಸಿ. ನವರು ತಮ್ಮ ಹಣವನ್ನು ಕೊಡುತ್ತಾರೆ. ಇವರು ತಾವು ಮಾಡುವ ಖರ್ಚನ್ನೇ ಮಾಡದೆ ಹೋದರೆ ಎಲ್.ಐ.ಸಿ. ನವರು ತಾನೇ ಹೇಗೆ ಹಣ ವನ್ನು ಕೊಡುತ್ತಾರೆ. ಬೆಂಗಳೂರು ನಗರದ ಜನತೆಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಪ್ರಥಮ ಕರ್ತವ್ಯ ಬೆಂಗಳೂರು ಕಾರ್ಪೋರೇಷನ್‌ಗೆ ಸೇರಿದ್ದುದು.

ಅಧ್ಯಕ್ಷರು.— ನೀವು ಭಾಷಣ ಮಾಡುತ್ತಿದ್ದೀರೋ, ಅಥವಾ ಪ್ರಶ್ನೆಯನ್ನು ಕೇಳುತ್ತಿದ್ದೀರೋ ?

ಶ್ರೀ ಧರ್ಮಸಿಂಗ್.—ನಾನು ಉಪ ಪ್ರಶ್ನೆಯನ್ನೇ ಕೇಳುತ್ತಿರುವುದು. ಕಾವೇರಿ ನೀರಿನ ಥರ್ಡ್ ಸ್ಟೇಜ್‌ಗೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಪ್ಯಾಟ್ರನ್ ಏನು ಇದೆ ಅದರಲ್ಲಿ ಇವರು ಸ್ವಲ್ಪ ಹಣವನ್ನು ಇದುವರೆವಿಗೂ ಖರ್ಚು ಮಾಡಿಲ್ಲ. ಇವರು ೧೯೯೦ನೇ ಇಸವಿಯೊಳಗೆ ಹೇಗೆ ಕೆಲಸವನ್ನು ಮುಗಿಸುತ್ತಾರೆ ? ಶಂಕುಸ್ಥಾಪನೆಯನ್ನು ಮಾಡಿಬಿಟ್ಟರೆ ಕೆಲಸ ತಾನಾಗಿಯೇ ಮುಗಿದುಹೋಗುತ್ತದೆಯೇ ಎಂದು ನಾನು ಕೇಳುತ್ತಿದ್ದೇನೆ. ಇವರಿಗೆ ವರ್ಲ್ಡ್ ಬ್ಯಾಂಕಿನ ಕಾಂಟ್ರಾಕ್ಟ್ ಇಲ್ಲ.

ಅಧ್ಯಕ್ಷರು.—ನೀವು ಉಪ ಪ್ರಶ್ನೆಯನ್ನು ಕೇಳಿ ?

ಶ್ರೀ ಧರ್ಮಸಿಂಗ್.—ನಾನು ಉಪ ಪ್ರಶ್ನೆಯನ್ನೇ ಕೇಳುತ್ತಿರುವುದು.

ಅಧ್ಯಕ್ಷರು.—ಈ ವಿಷಯದ ಬಗ್ಗೆ ಹೆಚ್ಚು ಮಾತನಾಡಬೆ ಕಾದರೆ, ನೀವು ಹಾಫ್ ಏನ್ ಹವರ್ ಡಿಸ್ಕಷನ್‌ಗೆ ಕಳುಹಿಸಿಕೊಡಿ.

ಶ್ರೀ ಧರ್ಮಸಿಂಗ್.—ಇದುವರೆಗೂ ಇವರು ಕಾವೇರಿ ಥರ್ಡ್ ಸ್ಟೇಜ್‌ಗೆ ೨೫ ಕೋಟಿ ಮಾತ್ರ ಖರ್ಚು ಮಾಡಿದ್ದಾರೆ ಈ ಯೋಜನೆಯನ್ನು ಮುಗಿಸುವುದಕ್ಕೆ ಇನ್ನು ೪ ವರ್ಷಗಳು ಮಾತ್ರ ಉಳಿದಿದೆ. ಇವರು ಇಷ್ಟು ಕಡಿಮೆ ಖರ್ಚು ಮಾಡುವದರಿಂದ ಈ ೪ ವರ್ಷಗಳಲ್ಲಿ ಯೋಜನೆ ಪೂರ್ಣ ಗೊಳ್ಳುವುದೇ ಎಂದು ನಾನು ಕೇಳಬೇಕಾಗಿದೆ, ಇವರು ಹಣವನ್ನು ವೇಗವಾಗಿ ಖರ್ಚು ಮಾಡುತ್ತಿಲ್ಲ. ಕಾವೇರಿ ಥರ್ಡ್ ಸ್ಟೇಜ್‌ನ್ನು ಕಂಪ್ಲೀಟ್ ಮಾಡತಕ್ಕ ಮನಸ್ಸು ಸರ್ಕಾರಕ್ಕೆ ಇಲ್ಲ. ಇವರು ೧೯೯೦ನೇ ಇಸವಿಯೊಳಗೆ ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕಾಗುವುದಿಲ್ಲ. ಸೆನೇ ಸ್ಟೇಜ್‌ನ್ನು ಪ್ರಾರಂಭ ಮಾಡುವ ಹೊತ್ತಿಗೆ ೪ನೇ ಸ್ಟೇಜ್‌ನ್ನು ಪ್ರಾರಂಭ ಮಾಡುವಂಥ ಪರಿಸ್ಥಿತಿ ಬಂದು ಬಿಡುತ್ತದೆ.

ಅಧ್ಯಕ್ಷರು.—ಈ ತರಹ ನೀವು ಭಾಷಣ ಮಾಡುತ್ತಾ ಹೋದರೆ, ನಾನು ತಮಗೆ ಸ್ಟಾಪ್ ಮಾಡಿ ಎಂದು ಹೇಳಬೇಕಾಗುತ್ತದೆ.

ಶ್ರೀ ಧರ್ಮಸಿಂಗ್.—ಮಾನ್ಯ ಲಕ್ಷ್ಮೀಸಾಗರ್‌ರವರು ಸಹ ಬೆಂಗಳೂರು ನಗರದಿಂದ ಆರಿಸಿ ಬಂದಿದ್ದಾರೆ, ಬೆಂಗಳೂರು ನಗರ ಕ್ಯಾಪಿಟಲ್ ಸಿಟಿಯಾಗಿದೆ, ಈ ಸಿಟಿಗೆ ನೀರನ್ನು ಒದಗಿಸುವುದಕ್ಕೆ ಎಲ್ಲರೂ ಗಮನ ಹರಿಸಬೇಕು.

ಅಧ್ಯಕ್ಷರು.—ತಾವು ಪ್ರಶ್ನೆಯನ್ನು ಕೇಳುತ್ತಿದ್ದೀರೋ, ಭಾಷಣ ಮಾಡುತ್ತಿದ್ದೀರೋ, ಅಥವಾ ಚರ್ಚೆ ಮಾಡುತ್ತಿದ್ದೀರೋ ? ತಮಗೆ ಪ್ರಶ್ನೆ ಎಂದರೆ ಏನು ಗೊತ್ತಿಲ್ಲವೇ ?

ಶ್ರೀ ಧರ್ಮಸಿಂಗ್.—ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಕಾವೇರಿ ಥರ್ಡ್ ಸ್ಟೇಜ್‌ಗೆ ರಾಜ್ಯ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ ಅದರಲ್ಲಿ ಒಂದು ಸ್ವಲ್ಪವೂ ಖರ್ಚು ಮಾಡಿಲ್ಲ. ಇವರು ಮಾಡುತ್ತಿರುವುದು ಸರಿ ಇಲ್ಲ.

ಅಧ್ಯಕ್ಷರು.—ನೀವು ಕೇಳುತ್ತಿರುವುದು ಪ್ರಶ್ನೆಯ ತರಹ ಇಲ್ಲ. ಪ್ರಶ್ನೆ ಎಂದರೆ ಏನು ಎಂಬುದನ್ನು ತಾವು ಸ್ವಲ್ಪ ಹೇಳಿ.

ಶ್ರೀ ಧರ್ಮಸಿಂಗ್.—ಇವತ್ತು ಏನಾಗಿದೆ ಎಂದರೆ.....

ಅಧ್ಯಕ್ಷರು.—ನಿಮ್ಮ ಭಾಷಣವನ್ನು ಬಂದ್ ಮಾಡ ಬೇಕೆಂದು ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಯವರು, ಚುನಾವಣೆ ಕಾಲದಲ್ಲಿ ಕಾವೇರಿ ನೀರ ಹಂತಕ್ಕೆ ಶಂಕುಸ್ಥಾಪನೆಯನ್ನು ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ನೀರು ಸರಬರಾಜು ಮಾಡತಕ್ಕಂಥ ಕಾರ್ಯ ಕ್ರಮಕ್ಕೂ ಉದ್ಘಾಟನಾ ಸಮಾರಂಭಕ್ಕೂ ಸಂಬಂಧ ಇಲ್ಲ.

ಶ್ರೀ ಧರ್ಮಸಿಂಗ್.—ಮತ್ತೆ ಇನ್ನೇನು ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಮನಸ್ಸಿನಲ್ಲಿ ಕೊಂಕು ಇದೆ. ಉದ್ಘಾಟನೆ ಮಾಡುವುದರಿಂದ ಚುನಾವಣೆಯಲ್ಲಿ ಗೆಲ್ಲುತ್ತೇವೆ. ಎಂದು ನಿಮ್ಮ ಮನಸ್ಸಿನಲ್ಲಿ ಇರಬಹುದು. ಆದರೆ ಆ ಭಾವನೆ ನಮ್ಮ ಮನಸ್ಸಿನಲ್ಲಿ ಇಲ್ಲ. ಬೆಂಗಳೂರು ನಗರದ ಜನರು ಬಹಳ ಬುದ್ಧಿವಂತರಿದ್ದಾರೆ. ಯಾರಿಗೆ ಓಟು ಕೊಡಬೇಕೆಂದು ಅವರಿಗೆ ಚೆನ್ನಾಗಿ ಗೊತ್ತು. ಕಾವೇರಿ ನೀರ ಹಂತವನ್ನು ಇವರ ಕೈಯಲ್ಲಿ ಮಾಡುವುದಕ್ಕಾಗುತ್ತಿಲ್ಲ. ಎಂದು ಹೇಳಿದ್ದಾರೆ. ಕಾವೇರಿ ನೀರ ಹಂತವನ್ನು ಪೂರೈಸಬೇಕೆಂದು ಅದಕ್ಕೋಸ್ಕರ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಎನ್ನತಕ್ಕ ಮಾತನ್ನು ಮತ್ತೊಮ್ಮೆ ಅವರಿಗೆ ಚೆನ್ನಾಗಿ ಕೇಳಿಸಿಕೊಳ್ಳಲಿ ಮತ್ತು ಮನವರಿಕೆ ಮಾಡಿಕೊಳ್ಳಲಿ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು —ಮಾನ್ಯ ಮಂತ್ರಿಗಳು ಸಮಜಾಯಿಸಿ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಧರ್ಮಸಿಂಗ್.—ಈ ಕಾವೇರಿ ಸೀನೇ ಹಂತಕ್ಕೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಯೋಜನಾ ವೆಚ್ಚ ಇದೆ ಆದರೆ ಇದುವರೆಗೂ ಅವರು ಕೇವಲ ೩ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇಷ್ಟು ಕಡಿಮೆ ಹಣ ಖರ್ಚು ಮಾಡುತ್ತಿರುವುದರಿಂದ ಇವರು ಹೇಗೆ ಯೋಜನೆಯನ್ನು ಪೂರ್ಣಗೊಳಿಸುತ್ತಾರೆ? ನಮ್ಮ ಕಾಲದಲ್ಲಿ ಹುಬ್ಬಳ್ಳಿ ಧಾರವಾಡ ನಗರಗಳಿಗೆ ನೀರು ಸರಬರಾಜು ಮಾಡುವುದಕ್ಕೆ ಎರಡು ವರ್ಷಗಳಲ್ಲಿ ೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಬಗ್ಗೆ ನಮ್ಮ ಕಾಲದಲ್ಲಿ ನೀವು ಯಾವ ರೀತಿ ಆಗ್ರಹ ಪಡಿಸುತ್ತಿದ್ದೀರಿ ಎಂಬುದನ್ನು ಗಮನದಲ್ಲಿ ಇಟ್ಟುಕೊಂಡು ತಾವು ಕೆಲಸ ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಲಿಖಿತ ಉತ್ತರದಲ್ಲಿ ಎಲ್ಲವನ್ನೂ ತಿಳಿಸಿದ್ದೇನೆ. ತಾವು ಅದನ್ನು ಓದದೇ ಪ್ರಾತನಾಡುತ್ತಿದ್ದೀರಿ.

ಶ್ರೀ ಧರ್ಮಸಿಂಗ್.—ನಾನು ಎಲ್ಲಾ ಓದಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಾವೇರಿಯ ಸೀನೇ ಹಂತಕ್ಕೆ ಬೇಕಾದ ಹಣವನ್ನು ಒದಗಿಸುವುದಕ್ಕೆ ಸರ್ಕಾರದ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ಅರಿತೇ ನಾವು ಕೆಲಸವನ್ನು ಮಾಡುತ್ತಿದ್ದೇವೆ. ನಾವು ೨೧೦ ಕೋಟಿ ರೂಪಾಯಿಗಳನ್ನು ಒದಗಿಸುತ್ತೇವೆ ಇನ್ನು ಉಳಿದ ಹಣವನ್ನು ಕೇಂದ್ರ ಸರ್ಕಾರವು ಕೊಡಬೇಕೆಂದು ಕೇಳಿದ್ದೆವು. ಕೇಂದ್ರ ಸರ್ಕಾರದವರು ೨೧೦ ಕೋಟಿ ರೂಪಾಯಿಗಳನ್ನು ಯಾವ ರೀತಿ ಒದಗಿಸಿಕೊಡುತ್ತೀರೆಂದು ಕೇಳಿದರು. ಸೀನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ೨೧೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಡುತ್ತೇವೆ. ಆದರಲ್ಲಿ.....ಎಲ್. ಐ. ಸಿ. ಯಿಂದ ೫೦ ಕೋಟಿ ರೂಪಾಯಿಗಳನ್ನು ಔಟ್‌ಸೈಡ್ ದಿ ಪ್ಲಾನ್ ನಿಂದ ಕೊಟ್ಟಿದ್ದೇವೆ. ಅವರ ಕಾಲದಲ್ಲಿ ಆಗಲಿಲ್ಲ ಈ ಕೆಲಸ.

ಶ್ರೀ ಧರ್ಮಸಿಂಗ್.—ಮೂರನೇ ಹಂತವನ್ನು ನಾವು ಮಾಡಿದುದ್ದು, ನಮ್ಮ ಕಾಲದಲ್ಲಿ ಮಾಡಿದುದ್ದು. ಆ ಮೂರನೇ ಹಂತದ ಯೋಜನೆಗೆ ನೀವು ನಾಲ್ಕು ವರ್ಷಗಳಲ್ಲಿ ಏನು ಮಾಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಧರ್ಮಸಿಂಗ್‌ರವರು ಈ ರಾಜ್ಯದ ಎಲ್ಲಾ ಭಾರವನ್ನು ಹೊತ್ತಿರತಕ್ಕಂತಹ ಮಹಾನುಭಾವರು. ಇಲ್ಲಿನ ಎಲ್ಲಾ ಕೀರ್ತಿಗಳು ಅವರಿಗೇ ಬರಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ ಈಗ ನಮಗೆ ಬಂದಿರತಕ್ಕಂತಹ ನೀರಿನ ಸಮಯವನ್ನು, ಆದರ ಭಾರವನ್ನು ನಾವು ಹೊತ್ತು, ಬೆಂಗಳೂರು ನಗರಕ್ಕೆ ನೀರನ್ನು ಒದಗಿಸುವ ಎಲ್ಲಾ ಕ್ರಮವನ್ನು ಸೂಕ್ತ ಕಾಲದಲ್ಲಿ ಮಾಡುತ್ತೇವೆ. ಅದಕ್ಕೆ ಬೇಕಾದ ಹಣವನ್ನು ಒದಗಿಸುತ್ತೇವೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ.....

ಅಧ್ಯಕ್ಷರು.—ಈಗಾಗಲೇ ಮೂರು ಸಪ್ಲಿಮೆಂಟರಿ ಆಗಿವೆ, ದಯವಿಟ್ಟು ತಾವು ಕುಳಿತುಕೊಳ್ಳಿ. ಬೇಕಾದರೆ ಅರ್ಧ ಗಂಟೆಯ ಕಾಲದ ಚರ್ಚೆಗೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಧರ್ಮಸಿಂಗ್.—ಅರ್ಧ ಗಂಟೆಯ ಕಾಲಾವಧಿಯ ಚರ್ಚೆಗೆ ಅವಕಾಶವನ್ನು ಕಲ್ಪಿಸಿಕೊಡಿ.

ಕೆ. ಜಿ. ಎಫ್. ನಲ್ಲಿ ಕುಡಿಯುವ ನೀರಿನ ಸಮಸ್ಯೆ

೫೧ (೨೫೯) ಶ್ರೀ ಬಿ. ಎಸ್. ಮಾಣಿ (ಕೆ.ಜಿ. ಎಫ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ. ಜಿ. ಎಫ್.ನಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ತೆಗೆದುಕೊಳ್ಳಲಾದ ತಾತ್ಕಾಲಿಕ ಕ್ರಮಗಳು ಅಗತ್ಯವನ್ನು ಪೂರೈಸಲು ಸಾಕಷ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ : —

ಆ) ಈ ಸಂಬಂಧವಾಗಿ ಶಾಶ್ವತ ಪರಿಹಾರವನ್ನು ಒದಗಿಸಲು ಸರ್ಕಾರವು ಉದ್ದೇಶಿಸಿದೆಯೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಹೌದು.